

ಬೆಳಗಾವಿ ಜಿಲ್ಲೆ ಸವದತ್ತಿ ಸಮೀಪದಲ್ಲಿರುವ ಯಲ್ಲಮ್ಮನ ಗುಡ್ಡವೀಗ ಶ್ರದ್ಧೆ–ಭಕ್ತಿಯ ಪ್ರವಾಹದಿಂದ ತುಂಬಿಹೋಗಿದೆ. ಅಲ್ಲಿ ನಡೆದಿರುವ ಯಲ್ಲವ್ವನ (ರೇಣುಕಾ) ಜಾತ್ರೆ ಇಂದಿನ ಹೈಟೆಕ್ ಯುಗದಲ್ಲೂ ಗ್ರಾಮೀಣ ಸಂಸ್ಕೃತಿಯನ್ನು ಬಿಂಬಿಸುತ್ತಿದೆ ಹಾಗೂ ಹೊಸ ತಲೆಮಾರಿನ ತರುಣ ತರುಣಿಯರನ್ನೂ ಸೆಳೆಯುತ್ತಿದೆ. ಧಾರ್ಮಿಕ ಚಟುವಟಿಕೆಗಳೊಂದಿಗೆ ಮನುಷ್ಯ ಸಂಬಂಧಗಳನ್ನು ಗಟ್ಟಿಗೊಳಿಸುವ ಕ್ಷಣಗಳಿಗೆ ಈ ಜಾತ್ರೆ ಸಾಕ್ಷಿಯಾಗುತ್ತದೆ. ಬಡವರು, ಧನಿಕರು ಎನ್ನುವ ತಾರತಮ್ಯವಿಲ್ಲದೇ ಎಲ್ಲರೂ ಭಕ್ತಿಯಲ್ಲಿ ಮಿಂದೇಳುತ್ತಿದ್ದಾರೆ.

‘ಏಳುಕೊಳ್ಳದ ನಾಡು’ ಎಂದೇ ಪ್ರಸಿದ್ಧಿಯಾಗಿರುವ ಗುಡ್ಡದ ತುಂಬೆಲ್ಲಾ ‘ಉಧೋ... ಉಧೋ... ಯಲ್ಲಮ್ಮ ನಿನ್ನಾಲ್ಕ ಉಧೋ...’ ಎನ್ನುವ ಭಕ್ತಿಯ ಘೋಷಗಳು. ತಾಯಿಯ ಸಾನ್ನಿಧ್ಯದಲ್ಲಿ ಮೇಲು–ಕೀಳಿನ ಮಾತಿಲ್ಲ. ಎಲ್ಲ ಸಮುದಾಯದವರೂ ಬಂದು ಇಲ್ಲಿಯೇ ತಾತ್ಕಾಲಿಕ ಟೆಂಟ್ ಹಾಕಿಕೊಂಡು ಕೆಲವು ದಿನ ತಂಗುತ್ತಾರೆ. ದೇವಿಗೆ ನೈವೇದ್ಯ ಅರ್ಪಿಸಿ, ಪೂಜೆ ಸಲ್ಲಿಸಿ ಧನ್ಯತಾ ಭಾವ ಹೊಂದುತ್ತಾರೆ.

ಜ.10ರಿಂದ ‘ಬನದ ಹುಣ್ಣಿಮೆ’ಗೆ ಜಾತ್ರೆ ಆರಂಭಗೊಂಡಿದೆ. ಅಂದು ಐದು ಲಕ್ಷಕ್ಕೂ ಹೆಚ್ಚಿನ ಭಕ್ತರು ಬಂದಿದ್ದರು. ಈ ಜಾತ್ರೆಯು ಮಹಾ ಶಿವರಾತ್ರಿವರೆಗೂ ಇರುತ್ತದೆ. ಶುಕ್ರವಾರ ಮತ್ತು ಮಂಗಳವಾರದಂದು ಹೆಚ್ಚಿನ ಜನ ಇರುತ್ತಾರೆ. ಫೆಬ್ರುವರಿ 9ರಂದು ‘ಭಾರತ ಹುಣ್ಣಿಮೆ’ಯಂದು ಭಕ್ತರ ಮಹಾಪೂರವೇ ಹರಿದುಬರಲಿದೆ.

## ಪ್ರಸಿದ್ಧ ಶಕ್ತಿಪೀಠ

ಉತ್ತರ ಕರ್ನಾಟಕದ ಈ ಪ್ರಸಿದ್ಧ ಶಕ್ತಿಪೀಠ ಅಪಾರ ಭಕ್ತಸಮೂಹವನ್ನು ಹೊಂದಿದೆ. ಎತ್ತಿನಗಾಡಿಗಳು ಮತ್ತು ವಾಹನಗಳನ್ನು ಬಳಸಿ ಸಿದ್ಧಪಡಿಸಿದ ತಾತ್ಕಾಲಿಕ ಟೆಂಟ್‌ನಲ್ಲಿ ಭಕ್ತರು ಬಿಡಾರ ಹೂಡುತ್ತಿದ್ದಾರೆ. ಬಹುತೇಕರು ದೂರದ ಊರುಗಳಿಂದ ಎತ್ತಿನಗಾಡಿಗಳಲ್ಲಿ ಕುಟುಂಬ ಸಮೇತ ಬರುವುದು ವಿಶೇಷ. ಹಲವರು ಪಾದಯಾತ್ರೆಯಲ್ಲೇ ಬಂದು ಹರಕೆ ತೀರಿಸುತ್ತಾರೆ.

ಬರೋಬ್ಬರಿ ಒಂದು ಸಾವಿರ ಎಕರೆ ಬಯಲು ಪ್ರದೇಶದಲ್ಲಿ ಹರಡಿರುವ ಗುಡ್ಡದ ಪರಿಸರದಲ್ಲಿ ಕೊರೆಯುವ ಚಳಿಯನ್ನೂ ಲೆಕ್ಕಿಸದೇ ಜನ ತಂಗುತ್ತಿದ್ದಾರೆ. ತಾವಿದ್ದಲ್ಲಿಯೇ ಸಿಹಿ ಅಡುಗೆ ತಯಾರಿಸಿ ದೇವಿಗೆ ಮೀಸಲು ನೈವೇದ್ಯ ಅರ್ಪಿಸಿ, ನಂತರ ವಿವಿಧ ವಾದ್ಯಗಳೊಂದಿಗೆ ಭಂಡಾರದ ಓಕುಳಿಯೊಂದಿಗೆ ದೇವಿಯ ಪ್ರಾಂಗಣಕ್ಕೆ ಬಂದು ದೇವಿಯ ದರ್ಶನ ಪಡೆಯುವುದು ಸಂಪ್ರದಾಯ.

ಸಮೀಪದ ಜೋಗುಳಬಾವಿ ಹಾಗೂ ಎಣ್ಣೆ ಹೊಂಡದಲ್ಲಿ ‘ಪುಣ್ಯ ಸ್ನಾನ’ ಮಾಡಿ, ಹೊಸ ಬಟ್ಟೆ ಧರಿಸಿ ಯಲ್ಲಮ್ಮನ ದರ್ಶನಕ್ಕೆ ಬರುತ್ತಾರೆ. ‘ಉಧೋ ಉಧೋ ಯಲ್ಲಮ್ಮ’ ಎಂಬ ಘೋಷಣೆಗಳು ಅವರಿಂದ ದಾರಿಯುದ್ದಕ್ಕೂ ಮೊಳಗುತ್ತವೆ. ಜೋಗಪ್ಪ, ಜೋಗತಿಯರ ಮೇಳ ಜಾತ್ರೆಗೆ ಮೆರುಗು ನೀಡುತ್ತಿದೆ. ಮುತ್ತೈದೆಯರು ಹಸಿರುಗಾಜಿನ ಬಳೆಗಳನ್ನು ತೊಡಿಸಿಕೊಂಡು ಸಂಭ್ರಮಿಸುತ್ತಾರೆ. ಹೀಗಾಗಿ, ಅಲ್ಲಿರುವ ಅಂಗಡಿಗಳವರಿಗೂ ‘ಹಬ್ಬ’ವೇ!



ದೇವಿಗೆ ಹಡ್ಡಲಿಗೆ ತುಂಬಿ ನೈವೇದ್ಯ ಮಾಡಿರುವುದು

### ಗುಡ್ಡದ ಏಳು ಜಾತ್ರೆಗಳು

1. ದವನ ಹುಣ್ಣಿಮೆ
2. ಮಹಾನವಮಿ ಹುಣ್ಣಿಮೆ
3. ಶೀಗೆ ಹುಣ್ಣಿಮೆ
4. ಗೌರಿ ಹುಣ್ಣಿಮೆ
5. ಹೊಸ್ತಿಲ ಹುಣ್ಣಿಮೆ
6. ಬನದ ಹುಣ್ಣಿಮೆ
7. ಭಾರತ ಹುಣ್ಣಿಮೆ

ಬನದ ಹುಣ್ಣಿಮೆ ಮತ್ತು ಭಾರತ ಹುಣ್ಣಿಮೆಗೆ ಲಕ್ಷಾಂತರ ಭಕ್ತರು ‘ನೆರೆ’ಯುತ್ತಾರೆ.